# ಕಣ್ಣಂಚಿನ ಈ ಮಾತಲಿ



■ ಪವಿತ್ರಾ ಭಟ್

ಕಣ್ಣೋಟಕ್ಕೆ ಮರುಳಾಗದವರಿಲ್ಲ. ಭಾವನೆಗಳ ಗುಚ್ಛವನ್ನೇ ವ್ಯಕ್ತಪಡಿಸುವ ಶಕ್ತಿ ಕಣ್ಣಿಗಿದೆ. ಕಣ್ಣೋಟದ ಬಗ್ಗೆ ಹೇಳುವಾಗಲೆಲ್ಲ 'ಜೋಕೆ... ನಾನು ಬಳ್ಳಿಯ ಮಿಂಚು... ಕಣ್ಣು ಕತ್ತಿಯ ಅಂಚು' ಹಾಡು ನೆನಪಾಗದಿರದು. ಮತ್ತೇರಿಸುವ ಕಣ್ಣುಗಳನ್ನು ಇನ್ನಷ್ಟು ಸುಂದರ ಮಾಡುವುದು ಇಂದಿನ ಟ್ರೆಂಡ್.

ಕಣ್ಣಿಗೆ ಹಚ್ಚುವ ಕಪ್ಪು ಕಾಡಿಗೆ ನೋಟವನ್ನು ಇನ್ನಷ್ಟು ಮೊನಚಾಗಿಸಬಲ್ಲದು. ಅದರ ಜತೆಗೆ ಕಣ್ರೆಪ್ಪೆ ಮಿಟುಕಿಸಿ ಮಾದಕ ನೋಟ ಬೀರಿದರೆ ಅದರ ಮತ್ತೇ ಬೇರೆ. ಹೊಳಪಾದ ಉದ್ದನೆಯ ರೆಪ್ಪೆ ಎಲ್ಲರಿಗೂ ಒಲಿಯುವುದಿಲ್ಲ. ಹೀಗಾಗಿಯೇ ಫ್ಯಾಷನ್ ಲೋಕದಲ್ಲಿ ಕೃತಕ ಕಣ್ರೆಪ್ಪೆಗಳು ಅಥವಾ ಐಲ್ಯಾಶ್‌ಗಳು ಹೆಂಗಳೆಯರನ್ನು ಸದಾ ಸೆಳೆಯುತ್ತವೆ.

ಮದುವೆ, ಪಾರ್ಟಿ, ವಿಶೇಷ ಸಂದರ್ಭಗಳಲ್ಲಿ ಕಣ್ಣುಗಳ ಅಂದ ಹೆಚ್ಚಿಸುವ ಐಲ್ಯಾಶ್‌ಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಕಣ್ಣು ಸೂಕ್ಷ್ಮ ಅಂಗವಾಗಿರುವ ಕಾರಣ ಐಲ್ಯಾಶ್‌ಗಳನ್ನು ಬಳಸುವಾಗ ಜೋಪಾನವಾಗಿರಬೇಕು. ಕಣ್ಣಿನ ರೆಪ್ಪೆಯ ಬಣ್ಣ, ಮುಖದ ಆಕಾರಕ್ಕೆ ಅನುಗುಣವಾಗಿ ಐಲ್ಯಾಶ್ ಆಯ್ಕೆ ಮಾಡಿಕೊಳ್ಳುವುದು ಉತ್ತಮ ಎನ್ನುತ್ತಾರೆ, ಮೇಕಪ್ ಕಲಾವಿದೆ ಆಶಾ ದಿನೇಶ್.

**ನೈಸರ್ಗಿಕ ಐಲ್ಯಾಶ್:** ನೈಸರ್ಗಿಕ ಕೂದಲಿನಿಂದ ತಯಾರಿಸಿದ ಐಲ್ಯಾಶ್‌ಗಳು ಸೂಕ್ತ. ಇವು ಹೆಚ್ಚು ಬಾರಿ ಬಳಕೆಗೂ ಬರುತ್ತವೆ. ಬಳಸಿದಾಗ ಭಾರ ಇರದು. ಕೃತಕ ಎನ್ನಿಸುವುದಿಲ್ಲ.

**ಪ್ಲಾಸ್ಟಿಕ್ ಐಲ್ಯಾಶ್:** ಪ್ಲಾಸ್ಟಿಕ್ ಐಲ್ಯಾಶ್‌ಗಳು ಹೆಚ್ಚು ಕೃತಕ ಎನಿಸುತ್ತವೆ. ಧರಿಸಲು ಹಗುರವಾಗಿದ್ದರೂ ಹೆಚ್ಚು ಹೊತ್ತು ಧರಿಸಲು ಸಾಧ್ಯವಾಗದು.

**ಮ್ಯಾಗ್ನೆಟಿಕ್ ಐಲ್ಯಾಶ್:** ಮ್ಯಾಗ್ನೆಟಿಕ್ ಐಲ್ಯಾಶ್‌ಗಳೂ ಮಾರುಕಟ್ಟೆಗಳಿಗೆ ಲಗ್ಗೆ ಇಟ್ಟಿವೆ. ಸ್ವತಃ ನಾವೇ ಅಂಟಿಸಿಕೊಳ್ಳಲು ಈ ಐಲ್ಯಾಶ್ ಉತ್ತಮ.

**ಶಾಶ್ವತ ಐಲ್ಯಾಶ್‌ಗಳು:** ಶಾಶ್ವತವಾಗಿರುವ ಐಲ್ಯಾಶ್‌ಗಳೂ ಮಾರುಕಟ್ಟೆಯಲ್ಲಿ ಲಭ್ಯವಿವೆ. ಐಲ್ಯಾಶ್‌ಗಳನ್ನು ಅಂಟಿಸಿಕೊಡುವ ಸ್ಟುಡಿಯೊಗಳು ಕೂಡ ತಲೆಯೆತ್ತಿವೆ. ಹಾಗೆಂದ ಮಾತ್ರಕ್ಕೆ ಇದು ಶಾಶ್ವತವಾಗಿರಲಿದೆ ಎಂದಲ್ಲ. ಒಮ್ಮೆ ಹಾಕಿದ ಕೃತಕ ಐಲ್ಯಾಶ್‌ಗಳು 25–30 ದಿನಗಳವರೆಗೆ ಬಾಳಿಕೆ ಬರುತ್ತವೆ. ಅದಾದ ಮೇಲೆ ಮತ್ತೆ ಅಂಟಿಸಿಕೊಳ್ಳಬೇಕಾಗುತ್ತದೆ.

## ಸೂಕ್ತ ಬಳಕೆ ಹೇಗೆ?

ಉತ್ತಮ ಗುಣಮಟ್ಟದ ಐಲ್ಯಾಶ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಮೊದಲ ಆದ್ಯತೆಯಾಗಿರಬೇಕು. ಅಗತ್ಯವಿದ್ದರೆ ತಜ್ಞರನ್ನೋ ಅಥವಾ ಮೇಕಪ್ ಕಲಾವಿದರನ್ನೋ ಸಂಪರ್ಕಿಸಿ ಸರಿಯಾದ ಮಾಹಿತಿ ಪಡೆದುಕೊಳ್ಳಿ. ಮೊದಲ ಬಾರಿ ಐಲ್ಯಾಶ್‌ಗಳನ್ನು ಬಳಸುತ್ತಿದ್ದರೆ ನೀವೇ ಪ್ರಯತ್ನ ಮಾಡುವುದು ಒಳಿತಲ್ಲ.

ಮೊದಲು ಐಲ್ಯಾಶ್‌ಗಳನ್ನು ತೆಗೆದುಕೊಂಡು ಕಣ್ಣಿಗೆ ಇಟ್ಟುಕೊಂಡು ಸರಿಯಾದ ಗಾತ್ರದಲ್ಲಿದೆಯೇ ಎನ್ನುವುದನ್ನು ಪರೀಕ್ಷಿಸಿಕೊಳ್ಳಿ. ದೊಡ್ಡದಾಗಿದ್ದರೆ ಐಲ್ಯಾಶ್‌ಗಳನ್ನು ಕೊನೆಯ ಭಾಗದಲ್ಲಿ ಕೊಂಚ ಕತ್ತರಿಸಿಕೊಳ್ಳಿ. ಅನಂತರ ಐಲೈನರ್ ಹಚ್ಚಿಕೊಳ್ಳಿ, ನಿಜವಾದ ರೆಪ್ಪೆಗಳಿಗೆ ಮಸ್ಕರಾ ಹಚ್ಚಿಕೊಳ್ಳಿ, ಈಗ ಲ್ಯಾಶಸ್‌ಗಳನ್ನು ಹಚ್ಚುವ ಸಮಯ. ಇದಕ್ಕೆ ಅಂಟು ಅಗತ್ಯವಿರುತ್ತದೆ. ಐಲ್ಯಾಶ್‌ಗೆ ಹಚ್ಚುವ ಅಂಟಿನ ಬಗ್ಗೆ ಜಾಗ್ರತೆಯಾಗಿರಿ. ಲ್ಯಾಶಸ್‌ಗಳಿಗೆ ಅಂಟನ್ನು ಹಚ್ಚಿ 30 ಸೆಕೆಂಡ್ ಬಿಟ್ಟು ಕಣ್ಣಿನ ಮೇಲೆ, ಅಂದರೆ ರೆಪ್ಪೆ ಮತ್ತು ಚರ್ಮದ ಮಧ್ಯೆ ಅಂಟಿಸಿಕೊಳ್ಳಿ. ನಿಧಾನವಾಗಿ ಒತ್ತಿ ಕೂರಿಸಿಕೊಳ್ಳಿ. ನಂತರ ಅಂಟಿಸಿಕೊಂಡ ಲ್ಯಾಶಸ್‌ಗಳಿಗೆ ತೆಳುವಾಗಿ ಮಸ್ಕರಾ ಹಚ್ಚಿಕೊಳ್ಳಿ. ಇದರಿಂದ ರೆಪ್ಪೆ ಮತ್ತು ಲ್ಯಾಶಸ್‌ಗಳು ಚೆನ್ನಾಗಿ ಹೊಂದಿಕೊಳ್ಳುತ್ತವೆ.

**ಜೋಪಾನ ಅಗತ್ಯ:** ಶಾಶ್ವತ ಐಲ್ಯಾಶ್‌ಗಳನ್ನು ಹಾಕಿಕೊಂಡು ಮುಖ ತೊಳೆಯುವಾಗ ಕಣ್ಣನ್ನು ಉಜ್ಜಬಾರದು. ಇದರಿಂದ ಅಂಟು ತಿಳಿಯಾಗಿ ಲ್ಯಾಶಸ್‌ಗಳು ಉದುರುವ ಸಾಧ್ಯತೆ ಇರುತ್ತದೆ.

ಒಮ್ಮೆ ಹಾಕಿಕೊಂಡ ಐಲ್ಯಾಶ್‌ಗಳನ್ನು ಕಾಟನ್ ಬಟ್ಟೆಗೆ ಮೇಕಪ್ ರಿಮೂವರ್ ಹಾಕಿಕೊಂಡು ತೆಗೆಯಬಹುದು. ಕಣ್ಣಿನ ಮೇಕಪ್ ತೆಗೆಯುವಂತೆ ನಿಧಾನವಾಗಿ ಕಣ್ಣಿನ ಮೇಲೆ ಉಜ್ಜಿದರೆ ಅಂಟು ಬಿಡುತ್ತದೆ. ಬಳಿಕ ಲ್ಯಾಶಸ್‌ಗಳನ್ನು ತೆಗೆಯಬಹುದು.

## ಮರುಬಳಕೆ

ಲ್ಯಾಶಸ್‌ಗಳನ್ನು ಸರಿಯಾಗಿ ಬಳಕೆ ಮಾಡಿದರೆ 4 ರಿಂದ 5 ಬಾರಿ ಬಳಸಬಹುದು. ಕಣ್ಣಿನಿಂದ ತೆಗೆದ ಲ್ಯಾಶಸ್‌ಗಳನ್ನು ಕಾಟನ್ ಪ್ಯಾಡ್‌ನಲ್ಲಿ ಸ್ವಚ್ಛಗೊಳಿಸಿಕೊಳ್ಳಿ. ಬಳಿಕ ರೆಪ್ಪೆಗೆ ಕೊಬ್ಬರಿ ಎಣ್ಣೆ ಅಥವಾ ಬಾದಾಮಿ ಎಣ್ಣೆಯನ್ನು ಹಚ್ಚಿ ಮಸಾಜ್ ಮಾಡಿಕೊಳ್ಳಿ. ಇದರಿಂದ ಉರಿ ಅಥವಾ ತುರಿಕೆ ಇದ್ದರೆ ನಿವಾರಣೆಯಾಗುತ್ತದೆ. ■

### ಅಪಾಯದ ಎಚ್ಚರಿಕೆಯಿರಲಿ

ಸರಿಯಾದ ರೀತಿಯಲ್ಲಿ ಅಥವಾ ಉತ್ತಮ ಗುಣಮಟ್ಟದ ಐಲ್ಯಾಶ್‌ಗಳನ್ನು ಬಳಸದಿದ್ದರೆ ಅಪಾಯ ಎದುರಾಗಬಹುದು. ಕಣ್ಣಿನ ಸೋಂಕುಗಳು, ಅಲರ್ಜಿ, ನೈಸರ್ಗಿಕ ಕಣ್ರೆಪ್ಪೆಗೆ ಹಾನಿಯಾಗುವ ಸಂಭವ ಹೆಚ್ಚು. ಸೌಂದರ್ಯ ಹೆಚ್ಚಿಸುವ ನೆಪದಲ್ಲಿ ದೇಹದ ಅಂಗಕ್ಕೆ ಹಾನಿಯಾಗದಂತೆ ಜೋಪಾನ ಮಾಡಿಕೊಳ್ಳುವುದೂ ಮುಖ್ಯವಾಗಿದೆ.